ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Issue-6, May – June 2026, Pp. 42-53**
**©*IIMRD*, Mysuru**

IIMRD JOURNALS
**www.iimrd.com**

# ಎಲ್.ಜಿ. ಹಾವನೂರು ವರದಿ: ಚಾರಿತ್ರಿಕ ಅವಲೋಕನ

**ಡಾ. ನರಸಿಂಹಮೂರ್ತಿ ಟಿ.ಎಸ್**
ಅಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ

**ಸಾರಾಂಶ: (Abstract)**

*ಎಲ್.ಜಿ. ಹಾವನೂರು ವರದಿಯು ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳ ಗುರುತಿಸುವಿಕೆ ಹಾಗೂ ಮೀಸಲಾತಿ ನೀತಿ ನಿರೂಪಣೆಯ ಇತಿಹಾಸದಲ್ಲಿ ಮಹತ್ವದ ದಾಖಲೆಯಾಗಿದೆ. ಈ ಲೇಖನದಲ್ಲಿ ಹಾವನೂರು ವರದಿಯ ಹಿನ್ನೆಲೆ, ರಚನೆ, ಉದ್ದೇಶಗಳು ಮತ್ತು ಶಿಫಾರಸ್ಸುಗಳನ್ನು ಕುರಿತು ಚರ್ಚಿಸಲಾಗಿದೆ. ಇದರೊಂದಿಗೆ ವರದಿ ಸಿದ್ಧವಾದ ಸಂದರ್ಭ, ಅದರ ಅನುಷ್ಠಾನದ ಹಂತಗಳು ಹಾಗೂ ಸಮಾಜದ ವಿವಿಧ ವರ್ಗಗಳ ಮೇಲೆ ಬೀರಿದ ಪರಿಣಾಮ, ಮೀಸಲಾತಿ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಹಾವನೂರು ವರದಿಯ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ. ಹೀಗಾಗಿ, ಹಾವನೂರು ವರದಿ ಕರ್ನಾಟಕದ ಸಾಮಾಜಿಕ ಪರಿವರ್ತನೆಯ ಪ್ರಮುಖ ದಾಖಲೆ ಎಂಬುದನ್ನು ಈ ಅಧ್ಯಯನ ಪ್ರತಿಪಾದಿಸುತ್ತದೆ.*

**ಮುಖ್ಯಪದಗಳು (Keywords):** *ಎಲ್. ಜಿ. ಹಾವನೂರು ವರದಿ, ಚಾರಿತ್ರಿಕ ಅವಲೋಕನ, ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳು, ಮೀಸಲಾತಿ ನೀತಿ.*

### ಪೀಠಿಕೆ

ಕರ್ನಾಟಕದ ಮೊದಲ ಹಿಂದುಳಿದ ಆಯೋಗವೆಂದರೆ "ಎಲ್.ಜಿ. ಹಾವನೂರರ ಆಯೋಗ"ವಾಗಿದೆ. ಕರ್ನಾಟಕದಲ್ಲಿ ವಿಶೇಷವಾಗಿ ಮೀಸಲಾತಿಯ ಚಹರೆಗಳು ಸಷ್ಟವಾಗಿ 19ನೇ ಶತಮಾನದ ಕೊನೆಯ ಭಾಗದಲ್ಲಿ ಕಂಡು ಬರುತ್ತವೆ. ಯಾವುದೇ ವ್ಯವಸ್ಥೆಯಲ್ಲಿ ಸಮಾಜ ರಾಜಕೀಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಾಗೇ ಆ ರೂಪಿಸಲ್ಪಟ್ಟ ರಾಜಕೀಯ ಸಮಾಜದ ಮೇಲೂ ಪರಿಣಾಮ ಬೀರುತ್ತದೆ. ಆರ್ಥಿಕ, ಶೈಕ್ಷಣಿಕ ಲಾಭ ಪಡೆಯುವುದಕ್ಕೋಸ್ಕರ ಜನರು ಸಂಘಟಿತರಾಗಲು ಸಹಾಯವಾದದ್ದು ಸಮಾಜದಲ್ಲಿನ ಜಾತಿ ರಚನೆಗಳು. ಈ ಮೊದಲ ಜನರಿಗೆ ಜಾತಿ ಪ್ರಮುಖವಾಗಿ ಸಾಮಾಜಿಕ, ಧಾರ್ಮಿಕ ಸಂಘಟನೆಗಳಾಗಿ ಅನುಭವ ಗ್ರಾಹ್ಯವಾಗಿದ್ದರೆ ಈಗ ಅದು ರಾಜಕೀಯ ಸಂಘಟನೆಯಾಗಿಯೂ ಅನಿವಾರ್ಯವಾಗಿತ್ತು. ಅಧಿಕಾರದಲ್ಲಿರುವವರ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸಲು ಜಾತಿ ಪ್ರಮುಖ ವಾಹಕವಾಯಿತು. ಈ ಉದ್ದೇಶಕ್ಕೋಸ್ಕರ ಜಾತಿಯ ಸಂಘಟನೆ ಬದಲಾದ ರಾಜಕೀಯ ಹೊಂದಿಕೊಳ್ಳುವಂತೆ ತನ್ನ ಸ್ವರೂಪವನ್ನು ಬದಲಾಯಿಸಬೇಕಾಯಿತು. ಇದು ಮೈಸೂರು ರಾಜ್ಯದಲ್ಲಿ ಮಿಲ್ಲರ್

*Please cite this article as:* ನರಸಿಂಹಮೂರ್ತಿ, ಟಿ.ಎಸ್. (2026). ಎಲ್. ಜಿ. ಹಾವನೂರು ವರದಿ: ಚಾರಿತ್ರಿಕ ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(6). ಪು.ಸಂ.* 42–53

ವರದಿಯ ಶಿಫಾರಸ್ಸು ಜಾರಿಯಿಂದಾಗಿ ಬ್ರಾಹ್ಮಣರ ರಾಜಕೀಯ ಪ್ರಾಮುಖ್ಯತೆ ಕಡಿಮೆಯಾಗಿತ್ತು. ಇದಕ್ಕೆ ಕಾರಣ ಬ್ರಾಹ್ಮಣೇತರರ ಸಂಘಟನೆ ಹಾಗೂ ಹೊಸ ಸಂಸದೀಯ ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯಲ್ಲಿ ಯಾರು ಹೆಚ್ಚಿನ ಸಂಖ್ಯೆಯಲ್ಲಿ ಸಂಘಟಿತರಾಗುತ್ತಾರೋ ಅವರಿಗೆ ಪಾಲು ಸಿಗುತ್ತಿದ್ದುದು. ಜನಸಂಖ್ಯೆಯ ದೃಷ್ಟಿಯಿಂದ ಬ್ರಾಹ್ಮಣರು ಕಡಿಮೆ ಇದ್ದು, ಇದು ಅವರಿಗೆ ಅನಾನುಕೂಲಕರವಾಗಿ ಬೆಳವಣಿಗೆಯಾಗಿತ್ತು.

ಬ್ರಾಹ್ಮಣೇತರ ಚಳವಳಿಯಲ್ಲಿ ದಲಿತರು, ಬುಡಕಟ್ಟು ಇನ್ನುಳಿದವರು ಸಕ್ರಿಯವಾಗಿ ಗುರುತಿಸಿಕೊಂಡಿರಲಿಲ್ಲ. ಚಳವಳಿಯ ರಾಜಕೀಯ ಸಂಘಟನೆಯಾದ "ಪ್ರಜಾ ಮಿತ್ರ ಮಂಡಳಿ"ಯ ನಾಯಕರು ಬ್ರಾಹ್ಮಣೇತರರು ಒಟ್ಟು ಜನಸಂಖ್ಯೆಯ ಶೇ. 96% ರಷ್ಟು ಜನರು ಸಂಪೂರ್ಣ ಭಾಗವಹಿಸಿದರೆಂದು ಹೇಳುತ್ತಾರೆ. ಆದರೆ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಪ್ರಮುಖವಾಗಿ ಲಿಂಗಾಯಿತರು, ಒಕ್ಕಲಿಗರು ಮತ್ತು ಮುಸ್ಲಿಮರ ಅಕ್ಷರಸ್ಥ ನಾಯಕರುಗಳು ಮಾತ್ರ. ಇದಕ್ಕೆ ಅಸಂಘಟಿತ ಗುಂಪುಗಳಾಗಿದ ದಲಿತ, ಬುಡಕಟ್ಟು ಹಾಗೂ ಇನ್ನಿತರ ಹಿಂದುಳಿದ ಜಾತಿಗಳು ಸಕ್ರಿಯವಾಗಿ ಭಾಗವಹಿಸಿರಲಿಲ್ಲ. ಬ್ರಾಹ್ಮಣೇತರ ಮೇಲ್ಜಾತಿಯವರ ಹಿತಾಸಕ್ತಿಗಳ ಮತ್ತು ಅವರ ಹಿತಾಸಕ್ತಿಗಳ ನಡುವೆ ವೈರುಧ್ಯಗಳು ಅಸ್ಪೃಶ್ಯರ ಹಿತರಕ್ಷಣೆ ಬಗ್ಗೆ ಬಾಯಿಮಾತಿನಲ್ಲಿ ಒಲವು ತೋರಿದರೂ, ಆದರೆ ನಿಜವಾದ ಸಮಸ್ಯೆಗಳಿಗೆ ಪರಿಹಾರ ನೀಡುವ ಒಲವು ಸಂಘಟನೆಯು ಒಳಗೊಂಡಿರಲಿಲ್ಲ. ಆಗ ಲಿಂಗಾಯಿತರು ಹಾಗೂ ಒಕ್ಕಲಿಗರು ರಾಜಕೀಯ ಶಕ್ತಿಯಾಗಿ ಬೆಳೆದರು. 1905ರಲ್ಲಿ ಮೈಸೂರು ಲಿಂಗಾಯಿತರ ಎಜ್ಯುಕೇಷನ್ ಫಂಡ್‌ನ್ನು ಹಾಗೂ ಒಕ್ಕಲಿಗರು ಒಕ್ಕಲಿಗರ ಸಂಘ 1906ರಲ್ಲಿ ತಮ್ಮ ಸಂಘಟನೆಗಳನ್ನು ಸ್ಥಾಪಿಸಿಕೊಂಡರು. ಈ ಜಾತಿಯ ಸಂಘಟನೆಗಳು ವಾರ್ಷಿಕವಾಗಿ ಸಭೆ ಸೇರುವುದು, ಸರಕಾರಿ ಹುದ್ದೆಗಳ ಬಗ್ಗೆ ಚರ್ಚೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯಗಳು ಬಗ್ಗೆ ಹಾಗೂ ರಾಜಕೀಯ ಪಕ್ಷಗಳಲ್ಲಿ ತಮ್ಮ ಅಭ್ಯರ್ಥಿಗಳ ಆಯ್ಕೆಯ ಕುರಿತು ಚರ್ಚಿಸುತ್ತಿದ್ದರು. ಈ ಮೂಲಕ ರಾಜ್ಯದಲ್ಲಿ ಪ್ರಬಲವಾದ ರಾಜಕೀಯ ಜಾತಿಗಳಾಗಿ ಬೆಳೆದು ಬಂದವು. ಇದು 1972ರ ವರೆಗೂ ಯಾವುದೇ ಬದಲಾವಣೆಯಿಲ್ಲದೆ ತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಂಡಿದ್ದರು. ಈ ಮೂಲಕವಾಗಿ ಮೀಸಲಾತಿಯ ಬಹುಪಾಲು ಸೌಲಭ್ಯಗಳನ್ನು ಪಡೆಯುವಲ್ಲಿ ಯಶಸ್ವಿಯಾದರು.

**ಮುಖ್ಯಮಂತ್ರಿ ದೇವರಾಜು ಅರಸು: ಹಿಂದುಳಿದ ಆಯೋಗದ ಚಿಂತನೆ**

1972ರ ವರೆಗೆ ಜಾತಿ ಪ್ರಾಬಲ್ಯದಲ್ಲಿ ಲಿಂಗಾಯಿತರು ಹಾಗೂ ಒಕ್ಕಲಿಗರು ಯಾವುದೇ ಮಹತ್ವದ ಬದಲಾವಣೆಯಾಗಲಿಲ್ಲ. ವಿವಿಧ ಕ್ಷೇತ್ರಗಳ ತಮ್ಮ ಮೂಲಕ ಹಿಡಿತವನ್ನು ಸಾಧಿಸಿದರು. ಈ ಪ್ರಬಲ ಜಾತಿಗಳ ರಾಜಕೀಯ ಸಂರಚನೆ ಗುರುತರವಾಗಿ ಬದಲಾವಣೆಯಾಗಿದ್ದು 1972ರ ನಂತರ ಮತ್ತು ಈ ಬದಲಾವಣೆ ಪ್ರಮುಖ ಕಾರಣಕರ್ತರು ಮುಖ್ಯಮಂತ್ರಿ ಡಿ. ದೇವರಾಜು ಅರಸು.

ರಾಜಕೀಯ ನಿಪುಣ, ಹಿಂದುಳಿದ ವರ್ಗಗಳಿಗೆ ಆಶಾಕಿರಣವಾಗಿ ಕಂಡು ಬಂದಿರುವ ಅರಸರು ರವರು ಪಕ್ಷದ ಅಧ್ಯಕ್ಷತೆಯನ್ನು ವಹಿಸಿ ಚುನಾವಣೆಯಲ್ಲಿ ಪಕ್ಷಗಳ ಅಭ್ಯರ್ಥಿಗಳನ್ನು ಆರಿಸುವಾಗ ಲಿಂಗಾಯಿತ ಹಾಗೂ ಒಕ್ಕಲಿಗರಿಗೆ ಕಡಿಮೆ ಸ್ಥಾನ ನೀಡಿ, ಪರಿಶಿಷ್ಟ ಜಾತಿ, ಬುಡಕಟ್ಟು ಹಾಗೂ ಹಿಂದುಳಿದ ವರ್ಗಗಳಿಗೆ ಹೆಚ್ಚು ಸ್ಥಾನ ಕೊಡಲಾಗಿದ್ದು 1972–78ರಲ್ಲಿ ಚುನಾವಣೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು

ಗೆಲ್ಲಿಸಲಾಯಿತು. ಅದೇ ಸಂದರ್ಭದಲ್ಲಿ 1969ರ ಕಾಂಗ್ರೆಸ್ ಪಕ್ಷ ಒಡೆದು ವೀರೇಂದ್ರ ಪಾಟೀಲ್‌ರ ಕಾಂಗ್ರೆಸ್ ಪಕ್ಷ ಹಾಗೂ ನಿಜಲಿಂಗಪ್ಪ ನವರ ನೇತೃತ್ವದ ಸಂಸ್ಥಾ ಕಾಂಗ್ರೆಸ್ಸಿನೊಂದಿಗೆ ಅರಸು ರವರು ಗುರುತಿಸಿಕೊಂಡರು. ಮುಂದೆ ಇಂದಿರಾ ಗಾಂಧಿ ಸರ್ಕಾರ ಇರುವಾಗ ಮುಖ್ಯವಾಗಿ ಆಯ್ಕೆಯಾದರು. ಆಗ ಇಂದಿರಾ ಗಾಂಧಿಯವರ ಗರಿಬೀ ಹಟಾವೋ, 12 ಅಂಶಗಳ ಕಾರ್ಯಕ್ರಮ, ಉಳುವವನೇ ಭೂಮಿಯ ಒಡೆಯ ಎಂಬ ಕಾರ್ಯಕ್ರಮಗಳನ್ನು ಕರ್ನಾಟಕದಲ್ಲಿ ಯಶ್ವಸ್ವಿಯಾಗಿ ಜಾರಿಗೆ ತಂದ ಕೀರ್ತಿ ಅರಸರಿಗೆ ಸಲ್ಲುತ್ತದೆ.

ದೇವರಾಜು ಅರಸು ಅವರು ಅಧಿಕಾರಕ್ಕೆ ಬಂದ ನಂತರ ಹಿಂದುಳಿದ ವರ್ಗಗಳ ಹೊಸ ಯುಗವೊಂದು ಪ್ರಾರಂಭವಾಯಿತು. ದೇವರಾಜ ಅರಸ ಅವರು ಅಧಿಕಾರಕ್ಕೆ ಬಂದ ತಕ್ಷಣವೇ ನಾಗನಗೌಡ ಸಮಿತಿಯಲ್ಲಿನ ಲೋಪದೋಷಗಳನ್ನು ಗಮನದಲ್ಲಿಟ್ಟುಕೊಂಡು ಹಿಂದುಳಿದ ವರ್ಗಗಳನ್ನು ಗುರುತಿಸಲು 1972ರ ಆಗಸ್ಟ್ 8ರಂದು ಎಲ್.ಜಿ. ಹಾವನೂರ ಅಧ್ಯಕ್ಷತೆಯಲ್ಲಿ ರಾಜ್ಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಹಿಂದುಳಿದ ಆಯೋಗವೊಂದು ರಚಿಸಲಾಯಿತು.

**ಹಾವನೂರರ ವರದಿ (ಆಗಸ್ಟ್ 8, 1972–ನವೆಂಬರ್ 19, 1975)**

ಎಲ್.ಜಿ. ಹಾವನೂರರ ಅಧ್ಯಕ್ಷತೆಯಲ್ಲಿ ಆಗಸ್ಟ್ 8, 1972ರಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ಆಯೋಗ ರಚಿಸಲಾಯಿತು. ಎಲ್.ಜಿ. ಹಾವನೂರು ಸಮಿತಿಯ ಅಧ್ಯಕ್ಷರಾಗಿದ್ದರು ಹಾಗೂ ರಾಮಚಂದ್ರ ವೈ., ಕೆ.ಆರ್. ಶ್ರೀನಿವಾಸಲು ನಾಯಿಡು, ಕೆ.ಎಂ. ನಾಗಣ್ಣ, ಎ. ಮಸನಚೆಟ್ಟಿ, ಧರ್ಮಸಿಂಗ್, ಪಿ.ಟಿ. ಹಬೀಬ್ ಸದಸ್ಯರಾಗಿದ್ದರು.

ರಾಜ್ಯದ 378 ಹಳ್ಳಿಗಳಲ್ಲಿ 3,55,000 ಜನರನ್ನು ಸಂದರ್ಶನ ಮಾಡಿ, ಒಂದು ಅಧಿಕೃತ ಸಮೀಕ್ಷೆಯ ಕಾರ್ಯವನ್ನು ಕೈಗೊಳ್ಳಲಾಯಿತು. ಸುಮಾರು 171 ಜಾತಿಗಳು, ಉಪಜಾತಿಗಳು, ಬುಡಕಟ್ಟುಗಳನ್ನು ಸಮೀಕ್ಷೆಯಲ್ಲಿ ಒಳಪಡಿಸಲಾಗಿತ್ತು. ದಿನಾಂಕ 19, 11, 1975ರಂದು ಹಾವನೂರರ ವರದಿ ಸರ್ಕಾರಕ್ಕೆ ಸಮರ್ಪಣೆ ಮಾಡಲಾಯಿತು. ಅರಸು ಸರ್ಕಾರ 27.4.1978ರಲ್ಲಿ ಹಾವನೂರು ವರದಿಯಲ್ಲಿ ಕೆಲವೊಂದು ಬದಲಾವಣೆಗಳೊಂದಿಗೆ ಜಾರಿಗೆ ಮಾಡಲಾಯಿತು. ಹಾವನೂರರ ವರದಿಯಲ್ಲಿ 1918 ರಿಂದ 1956ರ ವರೆಗಿನ ಬ್ರಾಹ್ಮಣರ ಅಧಿಪತ್ಯವನ್ನು ಗುರುತಿಸಿದರೆ. ಬ್ರಾಹ್ಮಣರು ಶೈಕ್ಷಣಿಕ ಹಾಗೂ ಸರಕಾರಿ ಹುದ್ದೆಗಳಲ್ಲಿ ಅವರು ಮೇಲುಗೈ ಸಾಧಿಸಿದರು.

| **ಜಾತಿ** | **1918** | **1936** | **1942** | **1949** | **1956** |
|---|---|---|---|---|---|
| ಬ್ರಾಹ್ಮಣ | 64.86 | 61.32 | 54.52 | 41.29 | 34.90 |
| ಕ್ರೈಸ್ತರು | 15.14 | 8.15 | 7.86 | 5.53 | 5.75 |
| ಮುಸ್ಲಿಂ | 4.32 | 7.24 | 7.51 | 6.79 | 5.37 |
| ಲಿಂಗಾಯಿತರು | 1.89 | 5.00 | 5.78 | 9.65 | 12.74 |
| ಒಕ್ಕಲಿಗರು | 1.08 | 2.52 | 3.82 | 8.47 | 7.80 |
| ಮೊತ್ತ | 87.29 | 84.39 | 79.54 | 71.73 | 68.56 |
| ಹುದ್ದೆ | 370 | 760 | 865 | 1,437 | 1,530 |

ಈ ಪಟ್ಟಿಯಲ್ಲಿ 1918ರ ವೇಳೆಗೆ ಬಹುಪಾಲು ಬ್ರಾಹ್ಮಣರು ವಿದ್ಯಾವಂತರಾಗಿದ್ದು ಶೇಕಡಾ 94% ರಷ್ಟು ಪ್ರಥಮ ಹಾಗೂ ದ್ವಿತೀಯ ಹುದ್ದೆಗಳನ್ನು ಆಕ್ರಮಿಸಿಕೊಂಡಿದ್ದರು.

1956ರ ಬ್ರಾಹ್ಮಣರ ಪ್ರಾತಿನಿಧ್ಯ 1918ರ ಅರ್ಧಕ್ಕೆ ಇಳಿದಿದ್ದು ಕಾಣಬಹುದು. ಅದಕ್ಕೆ ಆಗ ಮೈಸೂರಿನ ಒಡೆಯರು ಬ್ರಾಹ್ಮಣರನ್ನು ಬಿಟ್ಟು ಉಳಿದ ಎಲ್ಲಾ ಜಾತಿಗಳು ಹಿಂದುಳಿದವುಗಳೆಂದು ಸಾರಿ ಮೀಸಲಾತಿ ನೀಡಿದ್ದು ಮೊಟ್ಟ ಮೊದಲು ಅತ್ಯಲ್ಪ ಪ್ರಮಾಣದಲ್ಲಿ ಪ್ರತಿನಿದ್ಯ ಹೊಂದಿದ್ದ ಲಿಂಗಾಯಿತ ಹಾಗೂ ಒಕ್ಕಲಿಗ ಜಾತಿಗಳವರು ಹೆಚ್ಚಿನ ಪ್ರಮಾಣದಲ್ಲಿ ವರ್ಷ ವರ್ಷವೂ ಆಡಳಿತ ಯಂತ್ರದಲ್ಲಿ ಪಾಲ್ಗೊಂಡು ಹೆಚ್ಚು ಪ್ರಬಲರಾದರು.

ಹಾವನೂರು ರವರು ಭಾರತೀಯ ಸಮಾಜದಲ್ಲಿ ಪರಿಶಿಷ್ಟ ಜಾತಿ, ಬುಡಕಟ್ಟುಗಳು ಇನ್ನಿತರ ಹಿಂದುಳಿದ ಜಾತಿಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದಿರುವ ವರ್ಗಗಳಿಂದ ಕೂಡಿದೆಯೆಂಬುದನ್ನು ಗುರುತಿಸಿದರು. ಇದು ರಾಜ್ಯದ ಸುಮಾರು 171 ಜಾತಿಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗಳ ವಾಸ್ತವ ಚಿತ್ರಣವನ್ನು ನೀಡುತ್ತದೆ.

ಶೈಕ್ಷಣಿಕ ಹಿಂದುಳಿಯುವಿಕೆಯನ್ನು ನಿರ್ಧರಿಸಲು ಎಸ್.ಎಸ್.ಎಲ್.ಸಿ. ಪರೀಕ್ಷೆ ಮಟ್ಟವನ್ನು ಆಧಾರವಾಗಿಟ್ಟುಕೊಂಡು 1972ನೇ ಏಪ್ರಿಲ್ ತಿಂಗಳ ಪರೀಕ್ಷೆಯಲ್ಲಿ ಆ ಜಾತಿಯ ಜನಸಂಖ್ಯೆಯಲ್ಲಿ ಸರಾಸರಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ತೆಗೆದುಕೊಂಡು ರಾಜ್ಯದ ಸರಾಸರಿಗಿಂತ ಕಡಿಮೆಯಾಗಿದ್ದ ಪಕ್ಷದಲ್ಲಿ ಆ ಜಾತಿಯನ್ನು ಶೈಕ್ಷಣಿಕವಾಗಿ ಹಿಂದುಳಿದ ಜಾತಿಯೆಂದು ನಿರ್ಧಾರ ಮಾಡಿದೆ. ಹಲವುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಯಿತು.

1. ಹಿಂದುಳಿದ ಪಂಗಡಗಳು
2. ಹಿಂದುಳಿದ ಜಾತಿಗಳು
3. ಹಿಂದುಳಿದ ಬುಡಕಟ್ಟು

ಈ ಮೂರು ವರ್ಗಗಳನ್ನು ಒಟ್ಟು ಜನಸಂಖ್ಯೆಯ ಒಂದು ಸಾವಿರ ಜನರಲ್ಲಿ ಒಂದು ಜಾತಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ಸಂಖ್ಯೆ ರಾಜ್ಯದ ಸರಾಸರಿಗಿಂತ ಕಡಿಮೆಯಾಗಿದ್ದು, ರಾಜ್ಯದ ಸರಾಸರಿಯ ಶೇ. 50ಕ್ಕಿಂತ ಕಡಿಮೆಯಾಗಿದ್ದವರನ್ನು ಹಿಂದುಳಿದ ಪಂಗಡ, ಹಿಂದುಳಿದ ಜಾತಿ, ಹಿಂದುಳಿದ ಬುಡಕಟ್ಟುಗಳೆಂದು ಪರಿಗಣಿಸಲಾಗಿದೆ.

ರಾಷ್ಟ್ರದ ವಿಧಿಯ ನಿಯಮದ 15(4)ರಂತೆ ಹಿಂದುಳಿದ ಜನಾಂಗಗಳಿಗೆ ಮತ್ತು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳಿಗೆ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ವಿಧಿಯ ರೀತಿಯ ಸೌಲಭ್ಯಗಳನ್ನೇರ್ಪಡಿಸುವ ಅವಕಾಶವಿದೆ.

ವಿಧಿ 16(4) ಕಾಯ್ದೆಯ ಪ್ರಕಾರ ರಾಜ್ಯದ ಸೇವೆಗಳಲ್ಲಿ ಸಾಕಷ್ಟು ಪ್ರತಿನಿಧಿ ಹೊಂದಿದ ಪೌರರಲ್ಲಿ ಹಿಂದುಳಿದ ವರ್ಗಗಳಾಗಿ ವಿಶೇಷ ರೀತಿಯ ನೌಕರಿಗಳನ್ನು ಮೀಸಲಾಗಿಡುವುದು ಅವಕಾಶವಿದೆ. ಹಾಗೂ ವಿದ್ಯಾಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಹುದ್ದೆಗಳಲ್ಲಿ 32% ಮೀಸಲಾತಿಯನ್ನು ನೀಡಲಾಗಿದೆ. ಇವುಗಳ ಮೀಸಲಾತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.

**ಪರಿಚ್ಛೇದ 15(4) ಪ್ರಕಾರ ಮೀಸಲಾತಿ**

| ವರ್ಗ | ಜನಸಂಖ್ಯೆ | ಮೀಸಲಾತಿ |
|---|---|---|
| 1. ಹಿಂದುಳಿದ ಕೋಮುಗಳು | 22.03 | ಶೇ. 16 |
| 2. ಹಿಂದುಳಿದ ಜಾತಿ | 14.49 | ಶೇ. 10 |
| 3. ಹಿಂದುಳಿದ ಬುಡಕಟ್ಟು | 8.00 | ಶೇ. 6 |
| **ಒಟ್ಟು** | **44.52** | **ಶೇ. 32%** |

**ಪರಿಚ್ಛೇದ 16(4) ಪ್ರಕಾರದ ಮೀಸಲಾತಿ**

| | | |
|---|---|---|
| 1. ಹಿಂದುಳಿದ ಕೋಮುಗಳು | 19.20 | ಶೇ. 16 |
| 2. ಹಿಂದುಳಿದ ಜಾತಿ | 14.49 | ಶೇ. 10 |
| 3. ಹಿಂದುಳಿದ ಬುಡಕಟ್ಟು | 8.00 | ಶೇ. 6 |
| **ಒಟ್ಟು** | **41.67** | **ಶೇ.32%** |

**ಹಾವನೂರ ವರದಿಯ ಶಿಫಾರಸ್ಸುಗಳು**

1. ಹಿಂದುಳಿದ ಬುಡಕಟ್ಟುಗಳಿಗೆ ನಿಗದಿಯಾದ ಸ್ಥಾನ 01 ಹುದ್ದೆಗಳು ತೆರವಾಗಿಯೇ ಉಳಿದರೆ ಅವುಗಳನ್ನು ಹಿಂದುಳಿದ ಸಮುದಾಯಗಳು ಹಾಗೂ ಹಿಂದುಳಿದ ಜಾತಿಗಳಿಗೆ ಬಿಟ್ಟುಕೊಡಬೇಕು. ಅದೇ ರೀತಿ ಹಿಂದುಳಿದ ಜಾತಿಗಳಿಗೆ ನಿಗದಿಯಾದ ಸ್ಥಾನ 01 ಹುದ್ದೆಗಳು ತೆರವಾಗಿಯೇ ಉಳಿದರೆ ಅವುಗಳನ್ನು ಹಿಂದುಳಿದ ಸಮುದಾಯ ಹಾಗೂ ಹಿಂದುಳಿದ ಬುಡಕಟ್ಟುಗಳಿಗೆ ಬಿಟ್ಟುಕೊಡಬೇಕು. ಈ ಮೂರು ಶ್ರೇಣಿಗಳಲ್ಲಿ ಯಾವ ಶ್ರೇಣಿಯಲ್ಲಿಯೇ ಆಗಲಿ ನಿಗದಿಯಾದ ಸಾಲಿನ ಸ್ಥಾನ 01 ಹುದ್ದೆಗಳು ತೆರವಾಗಿಯೇ ಉಳಿದರೆ ಅವುಗಳನ್ನು ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳಿಗೆ ಕೊಡಬೇಕು. ಒಂದು ವೇಳೆ ಈ ಯಾವುದೇ ಶ್ರೇಣಿಯಲ್ಲಿ ಸ್ಥಾನಗಳು 01 ಹುದ್ದೆಗಳು ತೆರವಾಗಿಯೇ ಉಳಿದರೆ ಅವುಗಳನ್ನು ಸಮಾನ ಮತ್ತು ಶ್ರೇಣಿಗೆ ವರ್ಗಾಯಿಸಬೇಕು.
2. ಸ್ಥಾನ ಮೀಸಲಾತಿ ಮತ್ತು ಕಾರ್ಯಗತಗೊಳಿಸುವ ವಿಧಾನ 10 ವರ್ಷಗಳ ಕಾಲ ಮುಂದುವರೆಯಬೇಕು. 10 ವರ್ಷಗಳ ನಂತರ ವಿಚಾರ ಪುನರ್‌ಪರಿಶೀಲಿಸಬೇಕು.
3. ಪ್ರತ್ಯೇಕ ಹಿಂದುಳಿದ ವರ್ಗಗಳ ನಿರ್ದೇಶನಾಲಯವನ್ನು ರಚನೆಯಾಗಬೇಕು.
4. ಭಾರತೀಯ ಸಂವಿಧಾನ ವಿಧಿ 154 ಹಾಗೂ 164ರ ಪ್ರಕಾರ ಸಮುದಾಯಗಳ ಜಾತಿಗಳನ್ನು ಮತ್ತು ಬುಡಕಟ್ಟುಗಳನ್ನು ಹಿಂದುಳಿದ ಪಂಗಡಗಳೆಂದು ಪರಿಗಣಿಸಬೇಕು.
5. ಪ್ರವೇಶ ರಿಜಿಸ್ಟರ್‌ನಲ್ಲಿ ವಿದ್ಯಾರ್ಥಿಯ ಜಾತಿಯನ್ನು ನಮೂದಿಸಲು ಒಂದು ಅಂಕಣವನ್ನು ಸೇರಿಸಿಕೊಳ್ಳಬೇಕೆಂದು ಪ್ರಾಥಮಿಕ ಇತರೆ ಶೈಕ್ಷಣಿಕ ಸಂಸ್ಥೆಗಳಿಗೆ ನಿರ್ದೇಶನವನ್ನು ಕೊಡಬೇಕು.

6. ಪಂಚಾಯಿತಿಯ ಹೊಂದಿರುವ ಪ್ರತಿ ಗ್ರಾಮದಲ್ಲಿ ಕಾಲೇಜನ್ನು ಹೊಂದಿರುವ ಪ್ರತಿ ಪಟ್ಟಣದಲ್ಲಿ ಕೊನೆಯ ಪಕ್ಷದಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ಹೊಂದಿರಬೇಕು. ಉಚಿತ ವಿದ್ಯಾರ್ಥಿ ನಿಲಯವನ್ನು ತೆರೆಯಬೇಕು. ಆದರೆ ಹಿಂದುಳಿದ ವರ್ಗಗಳ ಅಂತಹ ವಿದ್ಯಾರ್ಥಿಯ ತಂದೆ ತಾಯಿ ವಾರ್ಷಿಕ ಆದಾಯ 6,000/– ಕಡಿಮೆಯಾಗಿರಬೇಕು.
7. ಸ್ನಾತಕೋತ್ತರ ಶಿಕ್ಷಣದಲ್ಲಿ ಹಾಗೂ ಸಂಶೋಧನೆ ಸಂಸ್ಥೆಗಳಲ್ಲಿ ಮೀಸಲು ಸ್ಥಾನಗಳಿರಬೇಕು. ವಿಶೇಷಾಧ್ಯಯನಕ್ಕೆ ವಿದೇಶಗಳಿಗೆ 'ಹಿಂದುಳಿದ ವರ್ಗಗಳ' ಮೂರು ಶ್ರೇಣಿಗಳಿಗೂ ಅನುಗುಣವಾಗಿ ಪ್ರತಿ ವರ್ಷ 100 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಬೇಕು.
8. ಉಚಿತ ವಿದ್ಯಾರ್ಥಿ ವೇತನ ದೊರೆಯದ ಇರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಆಯಾ ಕಾಲಕ್ಕೆ ಕೊಡಬೇಕು.
9. ತಂದೆ ತಾಯಿಗಳ ವಾರ್ಷಿಕ ಆದಾಯ 6,000ಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಶಿಕ್ಷಣ ಶುಲ್ಕ, ಪರೀಕ್ಷಾ ಶುಲ್ಕಗಳಿಂದ ವಿನಾಯಿತಿ ಇರಬೇಕು.
10. "ಹಿಂದುಳಿದ ವರ್ಗಗಳ ಸಲಹಾ ಮಂಡಳಿ"ಯನ್ನು ಸರ್ಕಾರ ರಚಿಸಬೇಕು. ಮೇಲೆ ಹೇಳಿದ ಹಿಂದುಳಿದ ವರ್ಗಗಳ ಮೂರು ಶ್ರೇಣಿಗಳಿಗೆ ಮಾತ್ರ ಅದರ ಸದಸ್ಯರೇ ಸೀಮಿತಗೊಳ್ಳಬೇಕು.
11. ಅನುಸೂಚಿತ ಜಾತಿ–ಬುಡಕಟ್ಟುಗಳ ಆರ್ಥಿಕ ಏಳಿಗೆಗಾಗಿ ಸ್ಥಾಪಿಸಲಾಗಿರುವ ಹಣಕಾಸು ಕಾರ್ಪೋರೇಷನ್ ರೀತಿಯ ಕಾರ್ಪೋರೇಷನ್ ಒಂದನ್ನು ಹಿಂದುಳಿದ ವರ್ಗಗಳ ಆರ್ಥಿಕ ಏಳಿಗೆಗೆ ಸ್ಥಾಪಿಸಬೇಕು.
12. ನೇಮಕಾತಿ–ಪರೀಕ್ಷೆಗಳಲ್ಲಿ ಮುಂದುವರೆದ ಅಭ್ಯರ್ಥಿಗಳೊಂದಿಗೆ ಯಶಸ್ವಿಯಾಗಿ ಸ್ಪರ್ಧಿಸಲು ಒಂದು ತರಬೇತಿ ಸಂಸ್ಥೆಯನ್ನು ಸ್ಥಾಪಿಸಬೇಕು.
13. ಹಿಂದುಳಿದ ವರ್ಗಗಳ ನೇಮಕಕ್ಕೆ ಸಂಬಂಧಿಸಿದಂತೆ ಅದರ ಕನಿಷ್ಟ ವಯೋಮಿತಿಯನ್ನು ಇತರರಿಗಿಂತ 5 ವರ್ಷ ಹೆಚ್ಚಿಸಬೇಕು.
14. ಹಿಂದುಳಿದ ವರ್ಗಗಳಲ್ಲಿ ಶೇ. 32% ರಷ್ಟು ಮೀಸಲಾತಿ ಕಲ್ಪಿಸಬೇಕು. ಈ ಮೀಸಲಾತಿಯನ್ನು ಹುದ್ದೆಯ ಆಯ್ಕೆ ಮತ್ತು ಬಡ್ತಿಗೆ ಅನ್ವಯಿಸಬೇಕು.
15. 1977ರ ಫೆಬ್ರವರಿ 22ರಂದು ರಾಜ್ಯ ಸರ್ಕಾರ ಹಾವನೂರು ಆಯೋಗದ ಎಲ್ಲಾ ಶಿಫಾರಸ್ಸುಗಳನ್ನು ಮಾನ್ಯ ಮಾಡಿ ಈ ಸಂಬಂಧ ಸರ್ಕಾರದ ಆದೇಶ ಹೊರಡಿಸಿತು. ಆದರೆ 1979 ಮೇ ಮತ್ತು ಜೂನ್ ತಿಂಗಳಿನಲ್ಲಿ ಕೆಲ ತಿದ್ದುಪಡಿ ಮಾಡಿ ಆ ಪ್ರಕಾರ ಮುಸ್ಲಿಂರನ್ನು ಮತ್ತು ಪರಿಶಿಷ್ಟ ಜಾತಿ/ಪಂಗಡಗಳಿಂದ ಮತಾಂತರಗೊಂಡ ಕ್ರೈಸ್ತರನ್ನು ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ಸೇರಿಸಿ ಈ ಸಮುದಾಯಗಳ ಮೀಸಲಾತಿ ಪ್ರಮಾಣ ಶೇ. 16–20ಕ್ಕೆ ಹೆಚ್ಚಿಸಿತು.

**ರಾಜ್ಯ ಸರ್ಕಾರ ನಿಗದಿ ಪಡಿಸಿದ ಮೀಸಲಾತಿ**

ರಾಜ್ಯ ಸರ್ಕಾರ ಹೊರಡಿಸಿದ ವಿವಿಧ ಕೋಮುಗಳಿಗೆ/ವರ್ಗಗಳಿಗೆ ಮೀಸಲಿದ್ದ ಶೇಕಡವಾರು ಸ್ಥಾನಗಳ ಸಂಖ್ಯೆ ಮತ್ತು ಮೀಸಲಾತಿ ಪ್ರಮಾಣ.

| ಕ್ರ.ಸಂ. | ವರ್ಗಗಳು | ಮೀಸಲಾತಿ ಪ್ರಮಾಣ |
|---|---|---|
| 1. | ಹಿಂದುಳಿದ ಸಮುದಾಯ | ಶೇ. 20 |
| 2. | ಹಿಂದುಳಿದ ಜಾತಿಗಳು | ಶೇ. 10 |
| 3. | ಹಿಂದುಳಿದ ಬುಡಕಟ್ಟುಗಳು | ಶೇ. 05 |
| 4. | ವಿಶೇಷ ವರ್ಗ | ಶೇ. 05 |
| **ಕೇಂದ್ರ ಸರ್ಕಾರದ ಆದೇಶದಂತೆ ಮೀಸಲಾತಿ ಗುಂಪುಗಳು** | | |
| 5. | ಪರಿಶಿಷ್ಟ ಜಾತಿ | ಶೇ. 15 |
| 6. | ಪರಿಶಿಷ್ಟ ಬುಡಕಟ್ಟು | ಶೇ. 03 |
| 7. | ರಕ್ಷಣಾದಳ ನಿವೃತ್ತ ಸಿಬ್ಬಂದಿ | ಶೇ. 10 |

ಹಾವನೂರು ತಮ್ಮ ವರದಿಯನ್ನು ಅರಸು ಅವರಿಗೆ ಒಪ್ಪಿಸುವ ಸಂದರ್ಭದಲ್ಲಿ ಹೇಳಿರುವ ಮಾತುಗಳು ಗಮನಾರ್ಹವಾದವು; ಜಾತಿ, ಬುಡಕಟ್ಟು ಹಾಗೂ ಕೋಮುಗಳ ಹಿಂದುಳಿದಿರುವಿಕೆಯನ್ನು "ಜಾತಿ" ಆಧಾರಿತ ನಿರ್ಧರಿಸಿರುವುದನ್ನು ಕೆಲವು ಮುಂದುವರಿದ ಜಾತಿಗಳು ವಿರೋಧಿಸುತ್ತಲೇ ಬಂದಿವೆ. ಇವರು ಎಷ್ಟರಮಟ್ಟಿಗೆ ಹಿಂದುಳಿದವರಿಗೆ ನೈಜ ಭಾವನೆಯನ್ನು ಹುಟ್ಟುಹಾಕಿದ್ದರಿಂದಲೇ ತಾವು ಒಳ್ಳೆಯ ಅವಕಾಶಗಳನ್ನು ಪಡೆದು ಮೇಲ್ಮುಖವಾಗಿ ಚಲಿಸುವುದು ಒಂದು ನೀತಿಯುತವಾದದ್ದು ಎಂದು ಭಾವಿಸಿಕೊಂಡಿವೆ. ಹೀಗೆ ನಮ್ಮ ದೇಶದ ಹೀನಾಯ ಸ್ಥಿತಿಯನ್ನು ವ್ಯಕ್ತಪಡಿಸಿದರು. (ತಿಪ್ಪೇಸ್ವಾಮಿ. 2006: ಪು.156).

ಹಿಂದುಳಿದ ವರ್ಗದವರು ಎಂದು ಜಾತಿ ಹೆಸರಿನಲ್ಲಿ ಸಂಘಟಿತರಾಗಲಿಲ್ಲ. ಹಾಗಾಗಿ ಕೆಳ ಜಾತಿಗಳಲ್ಲಿ "ಜಾತಿ ಪ್ರಜ್ಞೆ" ಎಂಬುದು ಮೂಡಲು ಸಾಧ್ಯವಾಗಲೇ ಇಲ್ಲ. "ಜಾತಿ ಪ್ರಜ್ಞೆ" ಇಲ್ಲದ ಕೆಳಜಾತಿಗಳ ಈ ದೌರ್ಜನ್ಯ ಮೇಲ್ಜಾತಿಗಳಿಗೆ ಒಂದು ರೀತಿಯಲ್ಲಿ ಅನುಕೂಲಕರವಾಗಿ ಪರಿಣಮಿಸಿತು. ಈ ಆಶಯವನ್ನು ಸಹ ಹಾವನೂರರು ಅತ್ಯಂತ ಸಂಕಟದಿಂದಲೇ ತೋಡಿಕೊಂಡರು.

ದೇವರಾಜ ಅರಸು 1977ರಲ್ಲಿ ಹಾವನೂರು ಆಯೋಗದ ವರದಿಯ ಶಿಫಾರಸ್ಸುಗಳನ್ನು ಯಥಾವತ್ತಾಗಿ ಜಾರಿಗೆ ತಂದು ಅನುಷ್ಠಾನಗೊಳಿಸಿದ್ದು ಅವರ ರಾಜಕೀಯ ಮುತ್ಸದ್ದಿತನಕ್ಕೆ ಸಾಕ್ಷಿಯಾಗಿದೆ. "ಹಿಂದುಳಿದ ವರ್ಗಗಳ ಬೈಬಲ್" ಎಂಬ ಖ್ಯಾತಿಯನ್ನು ಪಡೆಯಿತು. ಆದರೆ ಈ ಆಯೋಗ ಶಿಫಾರಸ್ಸು ಮಾಡಿದ ನಿಗದಿ ಪಡಿಸಿದ ಶೇ. 68% ರಷ್ಟು ಮೀಸಲಾತಿಯ ವಿರುದ್ಧ ಬಂದ ಟೀಕೆಗಳು ಅಷ್ಟಿಷ್ಟಲ್ಲ.

**ಹಾವನೂರು ವರದಿಯ ವಿರುದ್ಧ ಪ್ರತಿಭಟನೆಗಳು ಹಾಗೂ ಪತ್ರಿಕೆಗಳಲ್ಲಿ ಟೀಕೆಗಳು**

ಅತೃಪ್ತ ಸಮುದಾಯಗಳ ಮೀಸಲಾತಿಯ ವಿರುದ್ಧ ಅನೇಕ ಪ್ರತಿಭಟನೆಗಳನ್ನು ನಡೆಸಿದವು. ಒಕ್ಕಲಿಗರು ಮತ್ತು ಲಿಂಗಾಯಿತರು ಅರಸು ಮುಂದೆ ಸಾಕಷ್ಟು ಸವಾಲುಗಳನ್ನು ಎಸೆದರು. ಒಕ್ಕಲಿಗರನ್ನು ಹಿಂದುಳಿದ ಸಮುದಾಯದವರೆಂದು ಪರಿಗಣಿಸಿ, ಅವರ ರಾಜಕೀಯ ಪಾಲುದಾರರೆ ಲಿಂಗಾಯಿತವನ್ನು ಸಮುದಾಯ ಅತಿ ಮುಂದುವರೆದವರೆಂದು ಇದು ಪ್ರಬಲ ಸಮುದಾಯಗಳನ್ನು ಒಡೆಯಲು ಅರಸು ಎಸಗಿದ ರಾಜಕೀಯ ಸಂಚು ಎಂದು ಜರಿದರು.

ಬ್ರಾಹ್ಮಣ ಮುಖಂಡರು ಸಹಾ ಹಾವನೂರು ವರದಿಯನ್ನು ಸಂವಿಧಾನ ಬಾಹಿರವೆಂದರು. ಈ ವರದಿಯು ನ್ಯಾಯಸಮ್ಮತವಲ್ಲವೆಂದು, ಮುಂದುವರೆದ ಜನಾಂಗಗಳಿಗೆ ಅಲ್ಪಸಂಖ್ಯೆಯಲ್ಲಿ  ಸ್ಥಾನಗಳನ್ನು ಮೀಸಲಾಗಿಡಲಾಗಿದೆಯೆಂದು ಆರೋಪಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಈ ವರದಿಯನ್ನು ರಿಟ್ ಅರ್ಜಿಗಳ ಮೂಲಕ ಪ್ರಶ್ನಿಸಲಾಯಿತು. ಮೀಸಲಾತಿಯ ಪ್ರಮಾಣ ಶೇ. 50% ಮೀರಿದ್ದು, ಇದು ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ವಿರುದ್ಧವಾಗುತ್ತದೆಂಬುದು ಈ ಆಪಾದನೆಯನ್ನು ಮಾಡುವವರು ಜಮ್ಮು ಮತ್ತು ಕಾಶ್ಮೀರ ಸರಕಾರದ ಮೀಸಲಾತಿ ಶೇ. 90 ಇದ್ದುದನ್ನು ಹಾಗೂ ಮೀಸಲಾತಿಯ ಪರಿಮಾಣ ಶೇ. 50ನ್ನು ಮೀರಬಾರದೆಂದು ಬಾಲಾಜಿ ಕೇಸಿನಲ್ಲಿ ಹೇಳಿದ ಸರ್ವೋಚ್ಚ ನ್ಯಾಯಾಲಯ ತೀರ್ಪನ್ನು ಹಾವನೂರು ವರದಿಯಲ್ಲಿ ಮೀಸಲಾತಿಯ ಪ್ರಮಾಣವನ್ನು ಗಮನಿಸಿಲ್ಲವೆಂಬುದು ಟೀಕಿಸುತ್ತಾರೆ.

ಕಾರ್ಮಿಕರಲ್ಲಿ ಬಹಳಷ್ಟು ಅಸಂತೋಷಕ್ಕೆ ಕಾರಣವಾಗಿ ಆಡಳಿತವನ್ನು ಕುಂಠಿತಗೊಳಿಸುತ್ತದೆ. ಶೇ. 68% ಸ್ಥಾನಗಳನ್ನು ಮೀಸಲಾಗಿರಿಸುವ ಸರಕಾರ ಹಿಂದುಳಿದವರ ಕಲ್ಯಾಣ ಸಾಧನೆಯ ಹುರುಪಿನಲ್ಲಿ ಸಮಾಜದ ಉಳಿದವರ ಪ್ರಗತಿಯನ್ನು ತುಚ್ಚೀಕರಿಸುವ ಕಾನೂನು ಬಾಹಿರ ಹಾಗೂ ಭಾರತದ ಸಂವಿಧಾನದ ವಿಧಿಗೆ ವಿರೋಧವಾಗಿದೆ. ಆದ್ದರಿಂದ ಹಿಂದುಳಿದ ವರ್ಗ ಹಾಗೂ ಇತರೆ ವರ್ಗಗಳ ಹಕ್ಕುಗಳ ನಡುವೆ ಸಮತೋಲನಕ್ಕೆ ಪ್ರಯತ್ನ ನಡೆಸಬೇಕು.

ಹಾವನೂರು ವರದಿ ಬಗ್ಗೆ ಅಂದಿನ ಪತ್ರಿಕೆಗಳಲ್ಲಿ ಟೀಕಿಸಿದನ್ನು ಕಾಣಬಹುದು. ಹಾವನೂರು ಆಯೋಗ ವರದಿಯು ವೀರಶೈವರನ್ನೆಲ್ಲ ಒಂದೇ ಜನಾಂಗವೆಂದೂ ಪರಿಗಣಿಸದೆ ಪಂಗಡಳಾಗಿ ವಿಭಜಿಸಿ ಒಡಕನ್ನುಂಟು ಮಾಡುವ ಕಿಡಿಗೇಡಿತನ ಮಾಡಿದೆ ಎಂದು ಅಖಿಲ ಭಾರತ ವೀರಶೈವ ಮಹಾ ಸಭೆಯ ಅಧ್ಯಕ್ಷರಾದ ಜೆ.ಬಿ. ಮಲ್ಲಾರಾಧ್ಯ ಅವರು ಆರೋಪಿಸಿದರು. ಲಿಂಗಾಯಿತ, ಗಾಣಿಗರು, ಹಡಪದರು, ಕುಂಬಾರರು, ಬಡಗಿಗಳು, ವೀರಶೈವ ಜನಾಂಗದಿಂದ ಬೇರೆಯಾಗಿ ಪರಿಗಣಿಸುವುದು ದುರುದ್ದೇಶದಿಂದ ಕೂಡಿದೆಂದು ಅವರು ಆಪಾದಿಸಿದರು (ಸಂಯುಕ್ತ ಕರ್ನಾಟಕ: 13.6.1977).

ಹಾಗೂ ಅವರೆ ಮುಂದೆ ಲಕ್ಷಾಂತರ ಮಂದಿ ವೀರಶೈವರು ಅನಕ್ಷರಸ್ಥರಾಗಿದ್ದು, ದಟ್ಟ ದಾರಿದ್ರ್ಯದಿಂದ ಗುಡಿಸಲುಗಳಲ್ಲಿ ಜೀವನ ಸಾಗಿಸುತ್ತಿದ್ದರೂ, ವೀರಶೈವರನ್ನು ಹಿಂದುಳಿದ ವರ್ಗಗಳ ಆಯೋಗವು ಹಿಂದುಳಿದವರ ವರ್ಗಗಳ ಪಟ್ಟಿಯಲ್ಲಿ ನಿರ್ಲಕ್ಷಿಸಿದೆ ಎಂದು ಆರೋಪಿಸಿದರು (ಸಂಯುಕ್ತ ಕರ್ನಾಟಕ: 31.5.1977).

ಅಂದಿನ ರಾಜ್ಯದ ಪಶು ಸಂಕೋಪನಾ ಖಾತೆ ಸಚಿವ ಬಿ.ಜಿ. ಬಣಕಾರ್ ಅವರು ಹಾವನೂರು ವರದಿ ವೀರಶೈವ ಮತಸ್ಥರಿಗೆ ಯಾವುದೇ ರೀತಿಯ ಅನ್ಯಾಯವಾಗಿಲ್ಲವೆಂದು ಹೇಳಿಕೆ ನೀಡಿದರು ಇದು ಜೆ.ಬಿ. ಮಲ್ಲಾರಾದ್ಯರವರು ಕೆಲವೊಂದು ಪ್ರಶ್ನೆಗಳ ಮೂಲಕ ಆ ಹೇಳಿಕೆಯನ್ನು ವಿರೋಧಿಸಿದರು. ಹಾವನೂರು ವರದಿಗೆ ನಿಜಲಿಂಗಪ್ಪನವರ ವಿರೋಧ ಕಾಣಬಹುದು. ಇವರು ಜಾತಿ ಆಧಾರದ ಬದಲು ಆರ್ಥಿಕ ಆಧಾರದ ಮೇಲೆ ಹಿಂದುಳಿದ ವರ್ಗಗಳನ್ನು ಗುರುತಿಸಬೇಕೆಂದು ಅಭಿಪ್ರಾಯಪಟ್ಟರು. ಹಾವನೂರು ಆಯೋಗವು ಸಮಾಜದ ಜಾತಿಗಳ ಆಧಾರದ ಮೇಲೆ ಹಿಂದುಳಿದ ವರ್ಗಗಳನ್ನು ಗೊತ್ತುಪಡಿಸಿರುವುದು ಸರಿಯಲ್ಲವೆಂದು ಹೇಳಿದರು. ಜೊತೆಗೆ ಜಾತಿ ರಾಜಕೀಯವನ್ನು ನಿಲ್ಲಿಸಬೇಕೆಂದೂ ಒತ್ತಾಯ ಪಡಿಸಿದರು(ಸಂಯುಕ್ತ ಕರ್ನಾಟಕ 12.7.1977).

**ಹಾವನೂರು ವರದಿಗೆ ಬ್ರಾಹ್ಮಣರ ವಿರೋಧ**

ಹಾವನೂರು ಆಯೋಗಯು ಹಿಂದುಳಿದವರನ್ನು ಗುರುತಿಸಲು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗಳನ್ನು ಆಧಾರವಾಗಿಟ್ಟುಕೊಂಡಿತ್ತೆಂದು ಹೇಳಲಾಗಿದೆ. ಆದರೆ ವಾಸ್ತವಿಕವಾಗಿ ಕೇವಲ ಜಾತಿ ಆಧಾರ ಮೇಲೆಯೇ ಹಿಂದುಳಿದವರನ್ನು ಗುರುತಿಸುವುದು ಕಷ್ಟವಾಗಿದೆ. ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ಪಿ.ಎಚ್. ಕೃಷ್ಣರಾವ್ ಅವರು ಆರ್ಥಿಕ ಪರಿಸ್ಥಿತಿಯೊಂದೇ ಹಿಂದುಳಿದಿರುವಿಕೆಯನ್ನು ಗುರುತಿಸಲು ಆಧಾರವಾಗಿರಬೇಕೆಂದೂ ಆ ದೃಷ್ಟಿಯಿಂದ ಬ್ರಾಹ್ಮಣರು ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿರುತ್ತಾರೆಂದೂ ತಿಳಿಸಿದರು. (ಪ್ರಜಾವಾಣಿ: 19.2.1977) ಸರ್ವೋಚ್ಚ ನ್ಯಾಲಾಯದ ತೀರ್ಪು, ಬಾಲಾಜಿ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಪ್ರಕಾರ ಲಿಂಗಾಯಿತರು ಹಿಂದುಳಿದವರಲ್ಲವೆಂದು ಸ್ಪಷ್ಟವಾಗಿ ಸಾರಿದೆ. ಆದರೆ ವರದಿಯಲ್ಲಿ ವೀರಶೈವರು 30% ರಷ್ಟು ಹಿಂದುಳಿದಿರುವವರು ಪರಿಗಣಿಸುವುದನ್ನು ವೀರಶೈವರ ಮುಖಂಡರು ಟೀಕಿಸುವುದು ಕಾಣಬಹುದು(ಸಂಯುಕ್ತ ಕರ್ನಾಟಕ: 14.6.1977)

**ಟೀಕೆಗಳಿಗೆ ಹಾವನೂರ ವರದಿಯ ಸಮರ್ಥನೆ**

ಪತ್ರಿಕೆಗಳಲ್ಲಿ, ಹೋರಾಟಗಳಲ್ಲಿ ಮೀಸಲಾತಿಯ ವಿರುದ್ಧ ನಡೆಸುವ ಪ್ರತಿಭಟನೆಗಳಿಗೆ ಎಲ್.ಜಿ. ಹಾವನೂರರು ಸಮರ್ಥನೆಯನ್ನು ನೀಡುತ್ತಾರೆ.

"ವೀರಶೈವ ಪಂಥದ ಕೆಲವು ಬಣಗಳನ್ನು ಮುಂದುವರಿದು ಜನಾಂಗವೆಂದು ತಮ್ಮ ಆಯೋಗ ಪರಿಗಣಿಸುವುದು ನ್ಯಾಯಬದ್ಧವಾಗಿದೆ" ಎಂದು ಹಿಂದುಳಿದ ಆಯೋಗದ ಅಧ್ಯಕ್ಷರಾದ ಎಲ್.ಜಿ. ಹಾವನೂರು ಅವರು ತಿಳಿಸಿದರು.

ರಾಜ್ಯದ ಜನಸಂಖ್ಯೆಯಲ್ಲಿ ಶೇ. 22%ರಷ್ಟು ವೀರಶೈವ ಪಂಥದ ಜನಸಂಖ್ಯೆಯಾಗಿದ್ದು, ಅದರಲ್ಲಿ ಶೇ. 14.24% ರಷ್ಟು ಮುಂದುವರಿದ ವೀರಶೈವರೆಂದೂ, ಶೇ. 7.9% ಹಿಂದುಳಿದ ವೀರಶೈವರೆಂದು ಸಾಕ್ಷಾಧಾರಗಳಿಂದ ಪರಿಗಣಿಸಲಾಗಿದೆ ಎಂದು ಹೇಳಿದರು. ಈ ಪತ್ರಿಕಾ ಗೋಷ್ಠಿಯಲ್ಲಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಮಾಜಿ ಸಚಿವ ಜಿ.ಬಿ. ಶಂಕರರಾವ್, ಪ್ರೊ.ಎ.ಎಂ. ಧರ್ಮಲಿಂಗಮ್, ಬಳ್ಳಾರಿ ಜಿಲ್ಲೆಯ ಜನತಾ ಪಕ್ಷದ ಉಪಾಧ್ಯಕ್ಷ ಎಂ.ಪಿ. ಪ್ರಕಾಶ, ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದ ಸಿ.ಎನ್.

ಕೃಷ್ಣಾರೆಡ್ಡಿ, ವಕೀಲರಾದ ರವಿವರ್ಮ ಅವರು ಹಾಜರಿದ್ದರು. ಇವರ ಮುಂದೆ ಹಾವನೂರರ ವರದಿಯನ್ನು ಸಮರ್ಥನೆ ಮಾಡಿದನ್ನು ಕಾಣಬಹುದು (ಸಂಯುಕ್ತ ಕರ್ನಾಟಕ: 20.6.1977).

ಹಲವಾರು ಜಾತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯ ಉಂಟಾಯಿತು. ನಂತರ ಈ ಎಲ್ಲಾ ಜಾತಿಗಳಿಗೂ ಒಪ್ಪಿಗೆಯಾಗುವ ಹಿಂದುಳಿದ ವರ್ಗಗಳ ನಾಯಕನಿರಲಿಲ್ಲ. ಅರಸು ಅವರು ಚುನಾವಣೆಯಲ್ಲಿ ಸೋತ ನಂತರ ಅಧಿಕಾರಕ್ಕೆ ಬಂದ ಗುಂಡೂರಾವ್ ಅಧಿಕಾರ ಅವಧಿಯಲ್ಲಿ ಹಿಂದುಳಿದ ವರ್ಗಗಳ ಅಸಮಧಾನಕ್ಕೊಳಗಾಗಿದ್ದು ಪ್ರಬಲ ಕೋಮುಗಳಿಂದ ಆಗಾಗ್ಗೆ ಒತ್ತಾಯ ಬಂದವು. ಪರಿಣಾಮ ಹಾವನೂರು ವರದಿಯ ಲೋಪದೋಷಗಳನ್ನು ಸರಿಪಡಿಸಿ ವೈಜ್ಞಾನಿಕವಾಗಿ ರಚಿಸಲು ಸರ್ವೋಚ್ಚ ನ್ಯಾಯಾಲಯವು 2ನೇ ಆಯೋಗ ರಚಿಸಲು ಏಪ್ರಿಲ್ 18, 1983 ಟಿ. ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚನೆ ಮಾಡಿತ್ತು.

**ಹಾವನೂರು ವರದಿಯಿಂದ ಆದ ಪ್ರಯೋಜನಗಳು**

ಹಾವನೂರು ವರದಿಯಿಂದ ಕರ್ನಾಟಕ ಹಿಂದುಳಿದ ವರ್ಗಗಳಿಗೆ ಸಾಕಷ್ಟು ಪ್ರಯೋಜನೆಯಾಗಿವೆ ಎಂದು ಹೇಳಬಹುದು.

1. ಶಿಕ್ಷಣ–ಉದ್ಯೋಗವೆಂಬ ಕುಂಟುತನವನ್ನು ಹೋಗಲಾಡಿಸಿದರು.
2. ಬಿಹಾರದಲ್ಲಿ ಇದೇ ಮಾದರಿಯನ್ನು ಅನುಸರಿಸಲಾಯಿತು.
3. ಹರಿಜನ–ಗಿರಿಜನರು ಶಿಕ್ಷಣ–ಉದ್ಯೋಗಕ್ಕೆ ಮೀಸಲಾತಿ ಪಡೆದರೆ ಸಾಲದು ಸ್ವಂತ ಬದುಕಲು ಉದ್ಯೋಗ–ಉದ್ಯಮಗಳಲ್ಲಿ ಸ್ವಾವಲಂಬಿಗಳಾಗಲು ಶ್ರಮಿಸಿದರು.
4. ಹಿಂದುಳಿದ ವರ್ಗಗಳ ವಿದ್ಯಾವಂತರಲ್ಲಿ ಸಂಘಟನಾತ್ಮಕ ಪ್ರಜ್ಞೆಯನ್ನುಂಟು ಮಾಡಿತು.
5. ಚರ್ಮದ ಉದ್ಯೋಗ, ಕುರಿ ಪೋಷಣೆ, ಮೀನುಗಾರಿಕೆಯಲ್ಲಿ ಬಡ ಜನರಿಗೆ ಸ್ಥಾನ
6. ಆರ್ಥಿಕ ಸ್ವಾತಂತ್ರ್ಯ – ಮಂಡಳಿಗಳ ಸ್ಥಾಪನೆ

**ಹಾವನೂರು ವರದಿಯ ಫಲಿತಾಂಶಗಳು**

1. ಹಿಂದುಳಿದ ವರ್ಗಗಳ ಜನರಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಜ್ಞೆಯನ್ನುಂಟು ಮಾಡಿತು.
2. ಕರ್ನಾಟಕದಲ್ಲಿ ಈವರೆಗೂ ರಾಜಕೀಯ ನಾಯಕತ್ವದ ಪೈಪೋಟಿಯಲ್ಲಿ ಪಾರಂಪರಿಕ ಸ್ಪರ್ಧಿಗಳಾದ ಮೇಲ್ವರ್ಗಗಳ ಜೊತೆ ಹಿಂದುಳಿದ ವರ್ಗಗಳ ಜಾತಿ, ಸಮುದಾಯಗಳು ಸ್ಪರ್ಧಿಸಲು ಆಸ್ಪದವಾಯಿತು.
3. ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿ ರೂಪುಗೊಂಡ ಎರಡೂವರೆ ದಶಕಗಳಲ್ಲಿಯೇ ತುರ್ತು ಪರಿಸ್ಥಿತಿಗೊಳಗಾಗಿತ್ತು. ಆನಂತರದಲ್ಲಿ ಕರ್ನಾಟಕವು ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗ ಇತರೆ ಜಾತಿ–ವರ್ಗಗಳು ಅವರವರ ಏಳಿಗೆಗಾಗಿ ಜಾತಿ–ಸಂಘಟನೆಗಳನ್ನು ಕಟ್ಟಿಕೊಂಡರು. ಈ ಮೂಲಕ ರಾಜಕೀಯ ಸಂಘಟನೆಗೆ ಶಕ್ತಿ ಬಂದಿತ್ತು.

4. ಹಾವನೂರು ವರದಿಯು ಸಾಹಿತ್ಯ–ಸಂಸ್ಕೃತಿಗಳ ಮೇಲೂ ಪ್ರಭಾವ ಬೀರಿತು. ಶೋಷಿತ ವರ್ಗಗಳ ಪರವಾಗಿ ಆರಂಭಗೊಂಡು ಬಂಡಾಯ ಹಾಗೂ ದಲಿತ ಸಾಹಿತ್ಯ ಸಂಘಟನೆಗಳು ಹುಟ್ಟಿಕೊಂಡವು. ಅನೇಕ ಚಿಂತನೆಗಳಿಗೆ ಸ್ಫೂರ್ತಿ ಚಿಲುಮೆಯಾದರು.
5. ಹಾವನೂರು ಆಯೋಗಯು ಭಾರತದ ಇತರೆ ರಾಜ್ಯಗಳಿಗೂ ಹಾಗೂ ಕೇಂದ್ರ ಹಿಂದುಳಿದ ವರ್ಗಗಳ ಆಯೋಗಕ್ಕೆ ಮತ್ತು ಮಂಡಳಿ ವರದಿಗೆ ಆಧಾರವಾಯಿತು.
6. ಸಂಘ ಸಂಸ್ಥೆಗಳು ಸ್ಥಾಪನೆಗೊಂಡು ಹಿಂದುಳಿದ ವರ್ಗಗಳ ಜನತೆ ತಮ್ಮ ಹಕ್ಕುಗಳಿಗಾಗಿ ಹೋರಾಟ ಪ್ರಾರಂಭಿಸಿದರು.
7. 1980ರ ದಶಕಗಳಲ್ಲಿ ಬಿಲ್ಲವ, ಕುರುಬ, ಕೊರವ, ಬೇಡ, ಉಪ್ಪಾರ, ಈಡಿಗ ಈ ಜನಾಂಗಗಳಲ್ಲಿ ರಾಜಕೀಯ ನಾಯಕರು ತಲೆ ಎತ್ತಿದರು.

ಒಟ್ಟಾರೆ ಎಲ್.ಜಿ. ಹಾವನೂರು ಆಯೋಗಯು ಹಿಂದುಳಿದವರ ಪಾಲಿಗೆ ಆಶಾಕಿರಣವಾಗಿ ಕಂಡು ಬರುತ್ತದೆ. ಕರ್ನಾಟಕದಲ್ಲಿ ಬ್ರಾಹ್ಮಣ ನಂತರ ಬ್ರಾಹ್ಮಣೇತರ ಮೇಲ್ಜಾತಿಗಳು 1918 ರಿಂದ 1972ರ ವರೆಗೂ ತಮ್ಮ ಹಿಡಿತ ಸಾಧಿಸಿದನ್ನು ಹಾವನೂರು ರವರ ಸಮೀಕ್ಷೆಯ ಮೂಲಕ ತಿಳಿಯಬಹುದು. ಹಿಂದುಳಿದ ವರ್ಗಗಳಲ್ಲಿ ಜಾತಿಯ ಪ್ರಜ್ಞೆ ಇಲ್ಲದಿರುವುದಿಂದ ಮೇಲ್ಜಾತಿಗಳ ಹಿಡಿತದಲ್ಲಿ ನರಳಾಡಬೇಕಾಯಿತು. ಹಾವನೂರು ವರದಿಯು ಬಂದ ನಂತರ ಹಿಂದುಳಿದ ವಿದ್ಯಾವಂತ ವ್ಯಕ್ತಿಗಳು ಜಾತಿಯ ಪ್ರಜ್ಞೆ ಮೂಲಕ ಸಂಘಟಿತರಾಗಲು ಮುಂದಾದರು. 1972ರ ನಂತರ ಪ್ರಬಲ ಜಾತಿಗಳ ಗುರುತರವಾಗಿ ಬದಲಾವಣೆಗಳನ್ನು ಬಯಸಿದವರು ಡಿ. ದೇವರಾಜ ಅರಸು ಅವರ ಕಾಲದಲ್ಲಿ ಇವರು ಮುಖ್ಯಮಂತ್ರಿಯಾದ ಸಮಯದಲ್ಲಿ ಹಿಂದುಳಿದ ವರ್ಗಗಳಿಗೆ ಇನ್ನಿತರ ಜಾತಿಗಳಂತೆ ಕನಸು ಕಾಣುವ ಕಾರ್ಯಕ್ಕೆ ಕೈ ಹಾಕಿದರು. ಆ ಕಾರ್ಯಕ್ಕೆ ಹಿಂದುಳಿದ ವರ್ಗಗಳಲ್ಲಿ ಬೆಳೆದು ಬಂದ ಆಶಾಕಿರಣವಾಗಿ ಕಂಡು ಬರುವ ಎಲ್.ಜಿ. ಹಾವನೂರು ಅವರು ಅಧ್ಯಕ್ಷತೆಯಲ್ಲಿ ಹಿಂದುಳಿದ ಆಯೋಗವನ್ನು ರಚಿಸಿದರು. ಈ ಆಯೋಗವು ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನೀಡುವುದರ ಮೂಲಕ ಹಿಂದುಳಿದ ವರ್ಗಗಳ ಏಳಿಗೆಗೆ ಶ್ರಮಿಸಿದ ಆಯೋಗವೆಂದು ಕರೆಯಬಹುದು.

**ಪರಾಮರ್ಶನ ಗ್ರಂಥಗಳು**


- ದೇವೇಂದ್ರ ದೇಸಾಯಿ. (1979).***ಹಾವನೂರ ವರದಿ ಸಮಗ್ರ ಅಧ್ಯಯನ,*** ಚೈತ್ರ ಶಿಲ್ಪ ಪ್ರಕಾಶನ.
- ಶೂದ್ರ ಶ್ರೀನಿವಾಸ (ಸಂ.) (2006) **ದೇವರಾಜ ಅರಸು ಒಂದು ಅವಲೋಕನ.** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
- ವೀರೇಶ ಬಡಿಗೇರ (ಸಂ.) (2019) ***ಎಲ್.ಜಿ. ಹಾವನೂರ ವರದಿ ಮತ್ತು ಪ್ರಸ್ತುತ ಕರ್ನಾಟಕ.*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ವಿಜಯ್ ಪೂಣಚ್ಚ ತಂಬಂಡ (ಸಂ.) (2010) ***ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು.*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

- ಸೂರ್ಯನಾಥ ಕಾಮತ್. (1973). ***ಕರ್ನಾಟಕದ ಸಂಕ್ಷಿಪ್ತ ಇತಿಹಾಸ,*** ಎಂ.ಸಿ.ಸಿ. ಪಬ್ಲಿಕೇಷನ್ಸ್, ಬೆಂಗಳೂರು
- ಬೇನಾಳ, ಎಚ್.ಎಸ್. (2016). ***ಹಿಂದುಳಿದ ವರ್ಗಗಳಿಗೆ ಡಾ.ಬಿ.ಆರ್. ಅಂಬೇಡ್ಕರರ ಕೊಡುಗೆ.*** ಸಹನಾ ಪ್ರಕಾಶನ, ಗುಲಬರ್ಗಾ
- ಗೋವಿಂದರಾಜು, ಸಿ.ಆರ್. (ಸಂ). (2010). ***ಚಾರಿತ್ರಿಕ ಕರ್ನಾಟಕ. ಗ್ರಂಥಾಲಯ ಸಮಿತಿ,*** ಕರ್ನಾಟಕ ವಿಧಾನಮಂಡಲ, ವಿಧಾನಸೌಧ, ಬೆಂಗಳೂರು
- ಚಿನ್ನಮ್ಮ, ಟಿ.ಎಸ್. (2012). ***ಹಿಂದುಳಿದ ವರ್ಗಗಳ ಆಯೋಗ ಮತ್ತು ಎಲ್.ಜಿ. ಹಾವನೂರು.*** ಚರಿತ್ರೆ ಅಧ್ಯಯನ ಸಂ.8, (1), ಜುಲೈ–ಡಿಸೆಂಬರ್ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಅನ್ನಪೂರ್ಣ ವೆಂಕಟ ನಂಜಪ್ಪ. (2015). ***ಸಾಮಾಜಿಕ ಕ್ರಾಂತಿಯ ಹರಿಕಾರ ಡಿ. ದೇವರಾಜ ಅರಸು.*** ನವಕರ್ನಾಟಕ ಪ್ರಕಾಶನ, ಬೆಂಗಳೂರು
- ಚಂದ್ರಶೇಖರ್, ಎಸ್. (2002). ***ಆಧುನಿಕ ಕರ್ನಾಟಕದ ಆಂದೋಲನಗಳು.*** ನಮ್ಮ ಪ್ರಕಾಶನ, ತಿಪಟೂರು
- ಚಂದ್ರಶೇಖರ್, ಎಸ್. (1997). ***ಕರ್ನಾಟಕ ಚರಿತ್ರೆ ಸಂ–2,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಹಣಮಂತ್ರಾಯ ದೊಡ್ಡಮನಿ. (2011). ***ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ.*** ಗೀತಾಂಜಲಿ ಪ್ರಕಾಶನ, ಶಿವಮೊಗ್ಗ
- ಲಕ್ಷ್ಮಣ ತೆಲಗಾವಿ. (1999). ***ಹಿಂದುಳಿದ ವರ್ಗಗಳು ಮತ್ತು ದಲಿತ ಚಳವಳಿಗಳು.*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ವಿಧಾನಸೌಧ, ಬೆಂಗಳೂರು,
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದೇವರಾಜ ಅರಸು ಭವನ, ಬೆಂಗಳೂರು
- Report of First Backward Classes Commission (Havanur Commission report), 1975, Government of Karnataka Bangalore, Vol I, II, III and IV